
# ಸಾಧಕನ ಮನೋಭಾವ





**ಭಗವಂತ** ತನ್ನವನೇ ಎಂಬ ಪ್ರೀತಿ ಉಂಟಾಯಿತು ಎಂದರೆ, ಆಗ ವಿಧಿನಿಯಮಗಳಾವುವೂ ಬೇಕಾಗಿರುವುದಿಲ್ಲ. ಆಗ ಅದು ಕೊಯ್ಲಾದ ಗದ್ದೆಯ ಮೇಲೆ ಹಾದುಹೋದ ಹಾಗೆ. ತೆವರಿ ಮೇಲೆ ನಡೆದುಕೊಂಡು ಹೋಗಬೇಕಾಗಿರುವುದಿಲ್ಲ. ಯಾವ ದಿಕ್ಕಿಗೆ ಬೇಕಾದರೂ ನೇರವಾಗಿ ಹೋದರೆ ಆಯಿತು.

*(ವಚನವೇದ, ಸಂ.೧, ಪು.೧೬೨)*

**ಮಗುವಿನಂಥ** ವಿಶ್ವಾಸ ಬೇಕು. ಮಗು ತಾಯಿಯನ್ನು ನೋಡಲು ಯಾವ ರೀತಿಯಾದ ವ್ಯಾಕುಲತೆಯನ್ನು ತೋರಿಸುವುದೋ, ಆ ರೀತಿಯಾದ ವ್ಯಾಕುಲತೆ ಬೇಕು. ಅಂಥ ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೆಯೇ. ಅರುಣೋದಯವಾದ ನಂತರ ಸೂರ್ಯೋದಯವಾಗಲೇಬೇಕು. ಅಂಥ ವ್ಯಾಕುಲತೆಯುಂಟಾದ ಒಡನೆಯೇ ಭಗವಂತನ ದರ್ಶನ ದೊರೆಯುತ್ತದೆ.



*(ವಚನವೇದ, ಸಂ.೧, ಪು.೩೩೩)*

**ಪ್ರತಿದಿನವೂ** ಅಭ್ಯಾಸ ಮಾಡುತ್ತಿರಬೇಕು. ಅಂದು ಸರ್ಕಸ್ಸಿಗೆ ಹೋಗಿದ್ದೆ. ಅಲ್ಲಿ ನೋಡಿ ಬಂದೆ, ಒಂದು ಕುದುರೆ ಬಹಳ ವೇಗವಾಗಿ ಓಡುತ್ತಿದ್ದುದನ್ನು ಮತ್ತು ಅದರ ಮೇಲೆ ಒಬ್ಬ ಇಂಗ್ಲೀಷು ಮಹಿಳೆ ಒಂಟಿ ಕಾಲಿನಲ್ಲಿ ನಿಂತುಕೊಂಡಿರುತ್ತಿದ್ದುದನ್ನು. ಹಾಗೆ ಮಾಡಬೇಕಾದರೆ ಆಕೆ ಎಷ್ಟು ಕಾಲ ಅಭ್ಯಾಸ ಮಾಡಿರಬೇಕು!



*(ವಚನವೇದ, ಸಂ.೧, ಪು.೧೪೪)*

**ಮುಖ್ಯವಾಗಿ** ಮಾಡಬೇಕಾದುದೇನೆಂದರೆ, ಹೇಗಾದರೂ ಮಾಡಿ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಬೇಕು. ಒಮ್ಮೆಯೂ ಆತನನ್ನು ಮರೆಯಕೂಡದು. ಅದು ತೈಲಧಾರೆಯಂತೆ ಅವಿಚ್ಛಿನ್ನವಾಗಿರಬೇಕು. ಒಂದು ಇಟ್ಟಿಗೆಯನ್ನೇ ಆಗಲಿ, ಒಂದು ಕಲ್ಲನ್ನೇ ಆಗಲಿ ಅದೇ ಭಗವಂತ ಎಂದು ಭಾವಿಸಿ ಶ್ರದ್ಧಾ ಭಕ್ತಿಯಿಂದ ಪೂಜಿಸುವುದಾದರೆ, ಅದರಿಂದಲೇ, ಭಗವಂತನ ಕೃಪೆಯಿಂದ ಆತನ ದರ್ಶನ ದೊರೆತು ಬಿಡುವ ಸಂಭವ. *(ವಚನವೇದ, ಸಂ.೧, ಪು.೪೫೧)*



**ಭಗವಂತನನ್ನು** ಇಂದ್ರಿಯಗಳ ಮೂಲಕ ಅರಿಯಲಾಗುವುದಿಲ್ಲ. ಆದರೆ ಯಾವ ಮನಸ್ಸಿನಲ್ಲಿ ವಿಷಯರಸ ಎಂಬುದು ಇಲ್ಲವೇ ಇಲ್ಲವೋ ಅಂಥ ಶುದ್ಧ ಮನಸ್ಸಿನಿಂದ ಆತನನ್ನು ಅರಿಯಲು ಸಾಧ್ಯ .

*(ವಚನವೇದ, ಸಂ.೧, ಪು.೩೨೧)*

*‘ಶ್ರೀರಾಮಕೃಷ್ಣ ವಚನವೇದ’ದಿಂದ*